

ಕಾಡಾನೆಗಳಿಗೆ ಜಗ್ಗದ ಶ್ರಮಜೀವಿ. ತಾನು ತೋಟ ಮಾಡುತ್ತೇನೆ ಎಂದು ಉತ್ಸಾಹದಲ್ಲಿ ಹೇಳುವಾಗ, ಪತ್ನಿ ಶಂಕರಿಯಮ್ಮ 'ಮತ್ತೆ ಎಮ್ಮೆ ಕಾಟಗಳು ಎಲ್ಲಿ ಹೋಗಬೇಕು' ಎಂದು ನಗುತ್ತ ಪ್ರಶ್ನಿಸುತ್ತಾರೆ. 'ಓ ಅವೂ ಇರಬೇಕು, ತೋಟವೂ ಬೇಕು, ನಾವೂ ಇರಬೇಕು' ಎಂದು ಹೇಳುವ ಗೋಪಾಲಯ್ಯನವರ ಜೀವನದೃಷ್ಟಿ ಸಮಗ್ರವಾದುದು. ಮನುಷ್ಯಕೇಂದ್ರಿತವಾದ್ದಲ್ಲ. ಹಬೆಯಾಡುತ್ತಿರುವ ನದಿ ನೀರಿನಲ್ಲಿ ಇಳಿದು ಕೂರುತ್ತ ಪ್ರಕೃತಿಯ ಸುಖವನ್ನು ಅನುಭವಿಸುವ ಗೋಪಾಲಯ್ಯ ಅವರಿಗೆ ಪ್ರಾಯದ ಹಂಗಿಲ್ಲ. ಇಪ್ಪತ್ತರ ಹುರುಪು ತುಂಬಿದಂತೆ ಇರುವ ಕಾರಣಕ್ಕೆ ಅವರು ದಣಿಯುವುದಿಲ್ಲ. ಹೀಗೆ ಕಾದಂಬರಿ ಓದುತ್ತಾ ನಾನು ಅಲ್ಲೆ ಜೀವಿಸಿದ್ದೇನೆ ಎನ್ನುವ ಆಪ್ತತೆಯನ್ನು ನನಗೆ ಗೋಪಾಲಯ್ಯನ ಪಾತ್ರ ಒದಗಿಸಿದೆ.

'ಬದುಕಿಗೆ ಬಹುದೊಡ್ಡ ಅರ್ಥ ಕಲ್ಪಿಸಬೇಡ, ಬದುಕು ಚಿಕ್ಕದು ಬದುಕಿನ ಅನುಭವ ದೊಡ್ಡದು' ಎಂಬ ತಿಳಿವಳಿಕೆ ಮೂಡಿಸಿದ್ದು ಗೋಪಾಲಯ್ಯ. ಆ ಅನುಭವ ಸತ್ವವೇ ಅವರ ಪಾತ್ರವನ್ನು ನನ್ನಲ್ಲಿ ಹಿಡಿದಿಡುವಂತೆ ಮಾಡಿರಬಹುದು. ಮತ್ತು ಅದೊಂದು ಕೇವಲ ಪಾತ್ರವಲ್ಲ; ಸಾಮಾಜಿಕ ಜೀವನದ ದಾಖಲೆಯೂ ಹೌದು.

ಒಂದು ಕೃತಿಯ ಸೌಂದರ್ಯ ಹೆಚ್ಚುವುದು ಅದು ವಾಸ್ತವಿಕತೆಯ ಜಗತ್ತಿನೊಂದಿಗೆ ಬೆಸೆದುಕೊಂಡಾಗ. ಕೃತಿಶೀಲತೆಯ ತಾಜಾತನ ಹೆಚ್ಚಾಗುವುದು ಕೂಡಾ ಇದೇ ಕಾರಣಕ್ಕೆ. ಅಂತಹ ಸೌಂದರ್ಯವನ್ನು ಬೆಟ್ಟದ ಜೀವ ಕಾದಂಬರಿ ಹೊಂದಿದೆ. ಹಾಗಾಗಿ ಗೋಪಾಲಯ್ಯ ದೇಶೀವಾದಿಯೂ ಹೌದು, ವಾಸ್ತವವಾದಿಯೂ ಹೌದು. ವಸಾಹತೋತ್ತರ ಕಾಲದ ಕನ್ನಡಿಯ ಚೂರು ಹೌದು. ಬೆಟ್ಟ ಎಂದರೆ ಅಚಲವಾದದ್ದು. ಆದರೆ, ಬೆಟ್ಟಕ್ಕೆ ಚಲನೆಯನ್ನು ಕಲ್ಪಿಸಿ, ದೃಢವ್ಯಕ್ತಿತ್ವದ ಗೋಪಾಲಯ್ಯನ ಪಾತ್ರವನ್ನು ಶಿವರಾಮ ಕಾರಂತರು ಕಡೆದಿದ್ದಾರೆ. ಅವರನ್ನು ಬೆಟ್ಟದ ಜೀವವನ್ನಾಗಿಸಿದ್ದಾರೆ.ಬೆಟ್ಟ ನೋಡಿದಾಗಲೆಲ್ಲ ಅವರ ದೃಢ ಮನಸ್ಸಿನ ನಿಲುವು ಕಣ್ಣೆದುರಿಗೆ ಬರುತ್ತದೆ. ಇದು ನನ್ನ ಬದುಕಿನ ಸಾತತ್ಯಕ್ಕೆ ಗೋಪಾಲಯ್ಯನ ಪಾತ್ರ ನೀಡಿದ ಜೀವನ ದರ್ಶನ.

●